


12 ಅಕ್ಟೋಬರ್ 1997 ಬೆಲೆ ರೂ. 5
ನೆಪ್ಚ್ಯೂನ್ ಶೋಧದ 150 ವರ್ಷಗಳು
ರೈತರ ಕೈಯಲ್ಲಿ ಮೈದಳೆವ ರಕ್ಕಸರು
ಸುಧಾ
ಕಾಡು- ಮೋಡಗಳ ಮೋಹಕ ನಾಡು
ನಾಗಾಲ್ಯಾಂಡ್
ನೆಮ್ಮದಿ ಇಲ್ಲಿ ಮರೀಚಿಕೆ?

ಸುಧಾ
12 ಅಕ್ಟೋಬರ್ 1997, ಸಂಪುಟ 33 ಸಂಚಿಕೆ 41


ದಾಂಡೇಲಿಯಲ್ಲಿ ರಾಮಲೀಲಾ ಸಿದ್ಧತೆ ಪುಟ 42


| | | |
|---|---|---|
| ನರಮೇಧಗಳ ನಾಡು: ನಾಗಾಲ್ಯಾಂಡ್ | ✪ ಎಸ್ ಡಿ ಗುಂಜಗೋಡ್ಕರ್ | 12 |
| ರೈತರ ಕೈಯಲ್ಲಿ ಮೈದಳೆವ ರಕ್ಕಸರು | ✪ ರಾಮಚಂದ್ರ ಕನಕ | 42 |
| ನಾಗರಗಾಳಿಯ ವಜ್ರ ಜಲಪಾತ | ✪ ಅಮೃತ ಚರಂತಿಮಠ | 60 |
| ಕೂಡ್ಲಿಗಿಯಲ್ಲಿ ಗಾಂಧೀಜಿಯ ಚಿತಾಭಸ್ಮ | ✪ ಉಜ್ಜನಿ ರುದ್ರಪ್ಪ | 68 |
| ನೆಪ್ಚೂನ್ ಶೋಧದ 150 ವರ್ಷಗಳು | ✪ ಬಿ ಎಸ್ ಶೈಲಜಾ | 70 |

**• ಧಾರಾವಾಹಿ • ಫೋಟೋಕಾಮಿಕ್ಸ್**

| | | |
|---|---|---|
| 21 | ಮಂತ್ರಶಕ್ತಿ-6 | ● ಇಂದಿರಾತನಯ |
| 29 | ಸ್ನೇಹಸಂಗಮ-2 | ● ಗೀತಾ ಗಣೇಶ್ |
| 34 | ನನ್ನ ನಾ ಕಂಡಂತೆ: ಹಸಿರು ಹಾದಿ-2 | ● ಅ ನ ಯಲ್ಲಪ್ಪ ರೆಡ್ಡಿ |
| 45 | ಅನಾಮಿಕರು-30 | ● ಎಚ್ ಕೆ ಅನಂತರಾವ್ |
| 40 | ಸುಬ್ಬನಿಗೊಂದು ಹೆಣ್ಣು ಕೊಡಿ-25 | ● ಸುದರ್ಶನ್ |

**■ ಸಮುಕ್ಷಮ 36**


ಡಾ ಸಿದ್ಧಯ್ಯ ಪುರಾಣಿಕ

**• ಕಥೆ**

| | | |
|---|---|---|
| 49 | ಊಟ | ● ಕೆ ಟಿ ಗಟ್ಟಿ |
| 56 | ಬದುಕುವ ದಾರಿ | ● ಜಿ ಎಸ್ ಸುಶೀಲಾ ದೇವಿ ಆರ್ ರಾವ್ |
| 57 | ಆ ಸ್ತ್ರೀ | ● ಕಮಲದಾಸ್ |

**■ ಚಿತ್ರಸುಧಾ 77**


ರಾಜ್‌ಕಮಲ್

**■ ಸ್ಥಿರ ಶೀರ್ಷಿಕೆಗಳು**

| | |
|---|---|
| ಸಂಚಯ | 6 |
| ಸಂಪಾದಕೀಯ | 7 |
| ಸಮುದ್ರಮಥನ | 8 |
| ನಿಮ್ಮ ಪುಟ | 10 |
| ನೀವು ಕೇಳಿದಿರಿ? | 11 |
| ಉತ್ತರಮುಖಿ | 20 |
| ನಗೆಹೊನಲು | 25 |
| ಪುಸ್ತಕ ಪ್ರೀತಿ | 26 |
| ರಸಪ್ರಶ್ನೆ | 58 |
| ಆಟದಬಯಲು | 59 |
| ಎಳೆಯರ ಅಂಗಳ | 62–63 |
| ಚೌಚೌ ಚೌಕಿ | 64–65 |
| ಫ್ಯಾಂಟಮ್ | 66 |
| ವಿದ್ಯಮಾನ | 67 |
| ನಾಲ್ಕುಮತ್ತೊಂದು | 72 |
| ಗ್ರಹಗತಿ | 73 |
| ವ್ಯಕ್ತಿವಿಷಯ | 74 |
| ಸುದ್ದಿಯ ಹಿನ್ನೆಲೆ | 75 |
| ಚಿತ್ರಸುಧಾ | 76 |
| ಸುದ್ದಿ ಸ್ವಾರಸ್ಯ | 78 |


ಮುಖಚಿತ್ರ, ನಾಗಾ ಕನ್ಯೆ: ಪಾರದರ್ಶಿಕೆ: ಟಿ ಎಸ್ ಪ್ರಸಾದ್ ಕಲೆ–ವಿನ್ಯಾಸ: ಶ್ರೀಪಾದ್

ಸಂಪಾದಕ : ಕೆ ಎನ್ ಹರಿಕುಮಾರ್
ಪ್ರಕಾಶಕ ಮುದ್ರಕ : ವಿ ಪದ್ಮನಾಭನ್
ಡೆಕ್ಕನ್ ಹೆರಾಲ್ಡ್ ಪ್ರೆಸ್
ಮಾಲೀಕರು : ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್, ಬೆಂಗಳೂರು
ವಿಳಾಸ: ಸಂಪಾದಕರು, 'ಸುಧಾ' ವಾರಪತ್ರಿಕೆ,
75, ಮಹಾತ್ಮಾಗಾಂಧಿ ರಸ್ತೆ, ಬೆಂಗಳೂರು-560001.
ದೂರವಾಣಿ: 5588999 ಫ್ಯಾಕ್ಸ್: 5587675

50 ಸುವರ್ಣ ವರ್ಷ
1948 - 1998



# ಡಾ. ಸಿದ್ಧಯ್ಯ ಪುರಾಣಿಕ

'ಕಾವ್ಯಾನಂದ' ಕಾವ್ಯನಾಮದಿಂದ ಕನ್ನಡಿಗರಿಗೆ ಪರಿಚಿತರಾಗಿದ್ದ ಡಾ ಸಿದ್ಧಯ್ಯ ಪುರಾಣಿಕರು ಸಾಹಿತ್ಯ-ಆಡಳಿತ ಎರಡೂ ಕ್ಷೇತ್ರಗಳಲ್ಲಿ ಪ್ರಸಿದ್ಧಿ ಪಡೆದವರು. ನಾಟಕ, ಕತೆ, ಕಾದಂಬರಿ, ವಚನ, ಜೀವನಚರಿತ್ರೆ, ಸಂಪಾದನೆ-ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ 'ಕಾವ್ಯಾನಂದ'ರನ್ನು ಸಾಹಿತ್ಯ ಲೋಕ ಮುಖ್ಯವಾಗಿ ಗುರುತಿಸುವುದು ಕವಿಯಾಗಿ. ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯಲೋಕಕ್ಕೆ ಕೊಡುಗೆಯಾಗಿ ನೀಡಿರುವ ಕಾವ್ಯಾನಂದರಿಗೆ 'ಶಿಶುಕಾವ್ಯ' ರಚನೆಯಲ್ಲೂ ವಿಶೇಷ ಆಸಕ್ತಿ.

ರಾಯಚೂರು ಜಿಲ್ಲೆ, ಯಲಬುರ್ಗಿ ತಾಲೂಕಿನ ದ್ಯಾಂಪುರದ ಬಡಕುಟುಂಬವೊಂದರಲ್ಲಿ ಸಿದ್ಧಯ್ಯ ಪುರಾಣಿಕರ ಜನನ (1918). ಕಾವ್ಯ ಪ್ರತಿಭೆ ಅವರ ವಂಶದ ಬಳುವಳಿ. ತಂದೆ ಕಲ್ಲಿನಾಥ ಶಾಸ್ತ್ರಿ, ಅಜ್ಜ ಚೆನ್ನಕವಿ ಶಿವಕವಿಗಳೆಂದೇ ನಾಮಾಂಕಿತರು. ಕೌಟುಂಬಿಕ ಪರಿಸರದಲ್ಲಿ ನಡೆಯುತ್ತಿದ್ದ ಕಾವ್ಯಕಲಾಪ, ಪುರಾಣ ರಚನೆ–ಚರ್ಚೆ, ಬಾಲಕನಲ್ಲಿ ಕಾವ್ಯಶಕ್ತಿ ಅಭಿವ್ಯಕ್ತಿಸಲು ಸಹಾಯಕವಾಯಿತು. ತಂದೆಯಿಂದ 'ಜೈಮಿನಿ ಭಾರತ', 'ಶಬರ ಶಂಕರ ವಿಳಾಸ', 'ಪ್ರಭುಲಿಂಗ ಲೀಲೆ' ಮುಂತಾದ ಹಳೆಯ ಕಾವ್ಯ, ಛಂದಸ್ಸು, ಶಾಸ್ತ್ರ ಅಭ್ಯಾಸ ಮಾಡಿದ ಬಾಲಕನ ಮನಸ್ಸು, ಸಹಜವಾಗಿಯೇ ಕಾವ್ಯದತ್ತ ಹೊರಳಿತು.

'ಕರ್ನಾಟಕ ಗಾಂಧಿ' ಎಂದೇ ಹೆಸರಾಗಿದ್ದ ಹರ್ಡೇಕರ್ ಮಂಜಪ್ಪನವರ ಕಾರ್ಯಕ್ಷೇತ್ರವಾಗಿದ್ದ, ಬಿಜಾಪುರ ಜಿಲ್ಲೆಯ ಆಲಮಟ್ಟಿ ಆಶ್ರಮದಲ್ಲಿ, ಪುರಾಣಿಕರು ಕೆಲಕಾಲ ಕಳೆಯಬೇಕಾಯಿತು. ಹರ್ಡೇಕರ್‌ರ ಆದರ್ಶದ ಪ್ರಭಾವದಿಂದ ಪುರಾಣಿಕರ ವ್ಯಕ್ತಿತ್ವ ಹೊಸ ರೂಪ ಪಡೆಯಿತು.

ಪುರಾಣಿಕರ ಬಾಲ್ಯದ ದಿನಗಳಲ್ಲಿ, ಹೈದರಾಬಾದ್ ಕರ್ನಾಟಕದ ಸ್ಥಿತಿ ಅತ್ಯಂತ ಶೋಚನೀಯ. ಆಗ ಅಲ್ಲಿದ್ದದ್ದು ನಿಜಾಂರ ಆಳ್ವಿಕೆ. ಉರ್ದು ಭಾಷೆಯದೇ ಪ್ರಾಬಲ್ಯ. ಅಂತಹ ಪರಿಸ್ಥಿತಿಯಲ್ಲಿ ಕನ್ನಡದ ಏಳಿಗೆಗಾಗಿ ಟೊಂಕಕಟ್ಟಿ ನಿಂತವರಲ್ಲಿ ಪುರಾಣಿಕರು ಒಬ್ಬರು. ಆನಂದಕಂದ, ಬೇಂದ್ರೆ, ಮುಗುಳಿ, ಗೋಕಾಕ, ಮಾಸ್ತಿ ನರಸಿಂಗರಾಯರಂಥ ಹಿರಿಯರ ಪ್ರಭಾವಕ್ಕೆ ಒಳಗಾಗಿ ಕನ್ನಡಕ್ಕೆ ತಮ್ಮನ್ನು ಅರ್ಪಿಸಿಕೊಂಡ ಪುರಾಣಿಕರಿಗೆ, ಹರ್ಡೇಕರರ ಆಶ್ರಮದಲ್ಲಿ ದೊರೆತದ್ದು 'ಕರ್ನಾಟಕ' ಕಟ್ಟುವ ದೀಕ್ಷೆ. ಹರ್ಡೇಕರರ ಆಶ್ರಮದಲ್ಲಿದ್ದಾಗಲೇ ಅವರು 'ಕಾವ್ಯಾನಂದ' ಆದದ್ದು ಕೂಡ. ಅವರ ಮೊದಲ ಕವನ ಪ್ರಕಟವಾದದ್ದು 'ಜಯಕರ್ನಾಟಕ'ದಲ್ಲಿ.

ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಬಿ ಎ ಪದವಿ (1942) ಪಡೆದ ಪುರಾಣಿಕರು, ನಿಜಾಂರ ರಾಜ್ಯದಲ್ಲಿ ತಹಶೀಲ್ದಾರರಾಗಿ ಸರ್ಕಾರಿ ಹುದ್ದೆಯನ್ನು (1944) ಆರಂಭಿಸಿ, ಮುಂದೆ ಐ ಎ ಎಸ್ ದರ್ಜೆಗೆ ಏರಿ, ಅನೇಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ, ದಕ್ಷ ಹಾಗೂ ಪ್ರಾಮಾಣಿಕತೆಗೆ ಹೆಸರಾಗಿ, ಕಾರ್ಮಿಕ ಕಮೀಷನರ್‌ರಾಗಿ ನಿವೃತ್ತರಾದರು (1974).

ಪುರಾಣಿಕರಿಗೆ ತಹಶೀಲ್ದಾರರ ಹುದ್ದೆ ದೊರೆತಾಗ ಕನ್ನಡದ ಹಿರಿಯ ಸಾಹಿತಿ ಮಾಸ್ತಿ 'ಕನ್ನಡಕ್ಕೊಂದು ನಷ್ಟ' ಎಂದರಂತೆ. ಆ ಕ್ಷಣದಲ್ಲೇ "ನಾನು ಕನ್ನಡದ ಕೈ ಬಿಡುವುದಿಲ್ಲ. ಕೈಲಾದಷ್ಟು ಕನ್ನಡ ಸಾಹಿತ್ಯ ಸೇವೆ ಮಾಡುತ್ತೇನೆ" ಎಂದು ಸಂಕಲ್ಪ ಮಾಡಿದ ಅವರು ನುಡಿದಂತೆ ನಡೆದುಕೊಂಡರು.


ಕನ್ನಡ, ಉರ್ದು, ಹಿಂದಿ, ಸಂಸ್ಕೃತ, ಇಂಗ್ಲಿಷ್ ಭಾಷೆ–ಸಾಹಿತ್ಯಗಳನ್ನು ಆಳವಾಗಿ ಅಧ್ಯಯನ ಮಾಡಿದ ಪುರಾಣಿಕರು, ಕನ್ನಡ-ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಕೃತಿ ರಚಿಸಿರುವರು. 'ಜಲಪಾತ', 'ತರುಣಾ ಶ್ರಾವಣ', 'ಮಾನಸ ಸರೋವರ', 'ಹಾಲ್ದೆನೆ', 'ಮೊದಲು ಮಾನವನಾಗು', 'ಚರಗ' -ಪ್ರಕಟವಾಗಿರುವ ಅವರ ಕವನ ಸಂಕಲನಗಳು. 'ಆತ್ಮಾರ್ಪಣ' ಬಸವಣ್ಣನ ಬದುಕನ್ನು ಆಧರಿಸಿದ ನಾಟಕ. 'ಸ್ವತಂತ್ರ ಧೀರ ಸಿದ್ದೇಶ್ವರ' ಅಂಕಿತದಲ್ಲಿ ರೂಪಗೊಂಡ 'ವಚನೋದ್ಯಾನ', ಐನೂರ ಇಪ್ಪತ್ತೈದು ವಚನಗಳ ಸಂಕಲನ. 'ವಚನ ನಂದನ' 475 ವಚನಗಳ ಮತ್ತೊಂದು ಸಂಕಲನ. 'ಶರಣ ಚರಿತಾಮೃತ' (ಎರಡು ಸಂಪುಟ) ಪುರಾಣಿಕರ ಗದ್ಯ ಕೃತಿಗಳಲ್ಲಿ ಶಿಖರ ಪ್ರಾಯವಾಗಿರುವ ಶರಣರ ಜೀವನ ಗುಚ್ಛ. ಶರಣರ ಮತ್ತು ಶರಣ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಪುರಾಣಿಕರು 'ಬಸವ ಪಥ' ಮತ್ತು ಇಂಗ್ಲಿಷ್‌ನ 'ಬಸವ ಜರ್ನಲ್' ಪತ್ರಿಕೆಯ ಪ್ರಧಾನ ಸಂಪಾದಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಅಲ್ಲಮನ ಹಲವಾರು ವಚನಗಳನ್ನು ಇಂಗ್ಲಿಷಿಗೆ ಭಾಷಾಂತರಿಸಿ 'ಬಸವ ಜರ್ನಲ್' ಪತ್ರಿಕೆಯಲ್ಲಿ ಪ್ರಕಟಿಸಿರುವುದು ಅವರ ಪಾಂಡಿತ್ಯಕ್ಕೆ ಹಿಡಿದ ಕೈಗನ್ನಡಿ. ಕೆಲಕಾಲ ಪತ್ರಿಕೋದ್ಯಮದಲ್ಲೂ ಆಸಕ್ತಿ ವಹಿಸಿದ್ದ ಪುರಾಣಿಕರು 'ಲೋಕವಾಣಿ' ಪತ್ರಿಕೆಯಲ್ಲಿ ಬರೆಯುತ್ತಿದ್ದ ಸಂಪಾದಕೀಯ ಅವರ ಪತ್ರಿಕಾ ಧರ್ಮದ ಹಿರಿಮೆಗೆ ಸಾಕ್ಷಿ.

ಪುರಾಣಿಕರು ಅಧಿಕಾರಾವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ-ಕನ್ನಡ ನಿಘಂಟು ಯೋಜನೆಗಳಿಗೆ ನಿರ್ದಿಷ್ಟ ರೂಪ ಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಆಡಳಿತಾಂಗದಲ್ಲಿ ಕನ್ನಡದ ಹಿತಕ್ಕೆ ಧಕ್ಕೆ ಬರದಂತೆ ನೋಡಿಕೊಂಡ ಪುರಾಣಿಕರು, ಡಾ. ಸರೋಜಿನಿ ಮಹಿಷಿ ಸಮಿತಿ, ಕನ್ನಡ ಗಡಿ ಸಮಿತಿ, ಕನ್ನಡ ಪ್ರಾಧಿಕಾರದ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಗೋಕಾಕ್ ಚಳುವಳಿಯಲ್ಲೂ ಅವರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಹಲವಾರು ಪ್ರಶಸ್ತಿ-ಪುರಸ್ಕಾರಗಳಿಗೆ ಭಾಜನರಾಗಿದ್ದ ಪುರಾಣಿಕರು ಕಲ್ಬುರ್ಗಿಯಲ್ಲಿ ನಡೆದ 58ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು (1987). ರಾಜ್ಯ ಸಾಹಿತ್ಯ ಅಕಾಡೆಮಿ, ಭಾರತೀಯ ಭಾಷಾ ಭಿಲ್ವಾರ ಪ್ರಶಸ್ತಿ ಮೊದಲಾದ ಪ್ರಶಸ್ತಿ ವಿಜೇತರು. 'ಮೊದಲು ಮಾನವನಾಗು' ಅಮೂಲ್ಯ ಕವನವನ್ನು ಕನ್ನಡಕ್ಕೆ ನೀಡಿದ ಪುರಾಣಿಕರು ನಮ್ಮಿಂದ ಅಗಲಿ ದೂರವಾದದ್ದು, 1994ರಲ್ಲಿ.

-ಶಶಾಂಕ

ಸಿದ್ಧಯ್ಯ ಪುರಾಣಿಕರ ಹಸ್ತಾಕ್ಷರ ಮತ್ತು ಸಹಿ








ಸಿದ್ದಯ್ಯ ಪುರಾಣಿಕ